**ದಿಃ 11-10-2017 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.**
**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃ**

ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಸಮನ್ಸ್ ಬಂದಿಲ್ಲ. 3 ನೇ ವಾದಿ ನನ್ನನ್ನು ಸಾಕ್ಷಿ ಹೇಳಲು ಕರೆಸಿದ್ದಾರೆ. ನನ್ನ ಜಮೀನು ಸಾವಳಗಿ ರಸ್ತೆಯ ಹತ್ತಿರ ಶಿವಾಪೂರದಲ್ಲಿ ಇದೆ. ನನ್ನ ಜಮೀನಿನ ಸರ್ವೆ ನಂ. ನ್ನು ತೋರಿಸಲು ಉತಾರನ್ನು ಹಾಜರು ಮಾಡಿಲ್ಲ. ನನ್ನ ಜಮೀನು ಶಿವಾಪೂರದಲ್ಲಿ ಇಲ್ಲದಿದ್ದರೂ ವಾದಿಯರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ನಾನು ಶಿವಾಪೂರದಲ್ಲಿ ವಾಸಮಾಡುತ್ತಿಲ್ಲ ಮತ್ತು ಯಾವುದೇ ವಿಳಾಸ ದಾಖಲೆಗಳು ಇಲ್ಲ.

3 ನೇ ವಾದಿ ನನ್ನ ದೂರದ ಸಂಬಂಧಿ. 3 ನೇ ವಾದಿ ನನ್ನ ದೂರದ ಸಂಬಂಧಿಯಾದ್ದರಿಂದ ಅವರಿಗೆ ಅನುಕೂಲವಾಗಲು ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ವಕೀಲರು ಮಾಹಿತಿ ನೀಡಿದ್ದಾರೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳು ನನಗೆ ಗೊತ್ತಿಲ್ಲ

ದಾವಾ ಆಸ್ತಿಯ ಸರ್ವೆ ನಂ. ಗೊತ್ತಿಲ್ಲ. ಅದರ ಉತಾರನ್ನು ನೋಡಿಲ್ಲ. ದಾವಾ ಆಸ್ತಿಯ ಚಕ್ಕುಬಂದಿ ಗೊತ್ತಿಲ್ಲ. ವಾದಿಯರು ಯಾರ ಮೇಲೆ ದಾವೆ ಹೂಡಿದ್ದಾರೆಂದು ಗೊತ್ತಿಲ್ಲ. ವಾದಿಯರು ಜಮೀನನ್ನು ಖರೀದಿ ಕೊಟ್ಟಿದ್ದಕ್ಕೆ ಏಕತ್ರ ಆಸ್ತಿ ಎಂದು ದಾವೆ ಹೂಡಿದ್ದಾರೆ. ವಾದಿ ಮತ್ತು ಪ್ರತಿವಾದಿಯ ಮನೆತನದ ವಂಶಾವಳಿ ಬಗ್ಗೆ ಗೊತ್ತಿಲ್ಲ. ಸದರಿ ದಾವೆಯ ಬಗ್ಗೆ ನನಗೇನೂ ಗೊತ್ತಿಲ್ಲ ಎಂದರೆ ಸುಳ್ಳು. ಮೃತ ಹುಲೆಪ್ಪ ಜೀವಂತ ಇದ್ದಾಗ ಆತನ 3 ಜನ ಗಂಡು, ಮತ್ತು 3 ಜನ ಹೆಣ್ಣು ಮಕ್ಕಳು, ದಾವಾ ಆಸ್ತಿಗಳಲ್ಲಿ ಪಾಲು ಮಾಡಿಕೊಂಡು ಪ್ರತ್ಯೇಕವಾಗಿ ಕಬ್ಜೆಯಲ್ಲಿದ್ದಾರೆಂದರೆ ಸುಳ್ಳು. ಆ ಆಸ್ತಿಗಳಲ್ಲಿ ಪಾಲು ಆಗಿಲ್ಲ.

ವಾದಿಯರು ಹೊಡಿ ಬಡಿ ಮಾಡಿ ಹೊರಗೆ ಹಾಕಿದ್ದರಿಂದ ಅವರ ತವರು ಮನೆಯಲ್ಲಿ ಇದ್ದಾರೆ. ಪ್ರತಿವಾದಿ 2 ಮತ್ತು 3 ಇವರು ಪ್ರತ್ಯೇಕವಾಗಿ ವಾಸ ಮಾಡುತ್ತಿರುವುದರಿಂದ ವಾದಿಯರಿಗೆ ದಾವಾ ಆಸ್ತಿಯಲ್ಲಿಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಈ ಓ ಹೆ ಕೇ ಸರಿ ಇದೆ**

**ಪ್ರ.ದಿ.&ನ್ಯಾ.ದಂ.ಪ್ರ.ವರ್ಗ, ಗೋಕಾಕ.**